ಬಾಯಿಯೇ ಬರಲಿಲ್ಲ ಹೆಂಗಸಿಗೆ!" ಎಂದ ಮೇಲಂತೂ ನಿದ್ದೆ ಬಾರದ ರಾತ್ರಿಗಳಲ್ಲಿ ಅಂತಕ್ಕ ಸೀದಾ ಬಂದು ಅಕ್ಕುವಿನ ಮಗ್ಗುಲಲ್ಲೇ ಕುಳಿತುಕೊಳ್ಳುತ್ತಾಳೆ. ನಿನ್ನೆ ಕೂಡ ಅಷ್ಟೇ. ಮಂಪರಿನಲ್ಲಿದ್ದವಳನ್ನು ತಟ್ಟಿ ಎಬ್ಬಿಸಿ, "ಅಕ್ಕೂ... ನರಮನುಷ್ಯ ನೇರ್ಪದ ಬಾಳು ಬಾಳಿದ ಅಂದರೆ ಅವನು ಸಾವಿಗೂ ಹೆದರ ಬೇಕಾಗಿಲ್ಲ... ನಿನ್ನದು ನೇರ್ಪದ ಬಾಳು ತಾನೇ. ಮತ್ತೆ ಯಾಕೆ ಎದೆಯಲ್ಲಿ ಕಟ್ಟ ಹೊರುತ್ತೀ?... ಇಳಿಸ ಬೇಕಾದುದನ್ನೆಲ್ಲಾ ಈಗಲೇ ಇಳಿಸು ಮಾರಾಯ್ತಿ... ದಾರಿ ಹಗುರಾಗಲಿ. ಹಾಗೇ ನಿನ್ನ ಆ ಎಡ್ಡಿ ಸೋಜರ ಆಡಿನ ಕತೆ ಒಂದು ಕೇಳಲಿಕ್ಕೆ ಬಾಕಿ ಆಯ್ತಲ್ಲಾ ಮಾರಾಯ್ತಿ" ಎಂದಿದ್ದಾಳೆ.

ಈಸಿಚೇರಿನ ಬೆನ್ನಿಗೆ ಮೈಯ್ಯೊರಗಿಸಿದ ಅಕ್ಕು ಪೂಜಾರ್ತಿಯ ಎದೆಯಲ್ಲಿ ಇನ್ನಷ್ಟು ಭಾರ. ಮಧ್ಯಾಹ್ನ ಮಲಗುವ ಮೊದಲೇ ಮಾತ್ರೆ ನುಂಗಿದ ನೆನಪು. ಕಳೆದ ಐದಾರು ತಿಂಗಳಿಂದ ಹೀಗೆಯೇ. ಆಗಾಗ ಎದೆ ಭಾರ... ಸುಸ್ತು... ಬೆವರುವುದು. ರಮೇಶ ಗುರ್ತದ ಜಯದೇವ ಡಾಕ್ಟರಲ್ಲಿ ಕರೆದೊಯ್ದು ಎಲ್ಲಾ ಪರೀಕ್ಷೆ ಮಾಡಿಸಿದ್ದ. ಹಾರ್ಟ್ ವೀಕ್ ಆಗಿದೆ ಅಂದಿದ್ದ ಡಾಕ್ಟರು, "ಟೆನ್ಶನ್ ಮಾಡ್ತೀರಾ ಅಮ್ಮಾ" ಅಂತ ಅಕ್ಕು ಪೂಜಾರ್ತಿಯಲ್ಲಿ ಕೇಳಿದ್ದರು. ಮಾಡಬೇಕಾದ ಕಾಲದಲ್ಲೇ ಮಾಡ್ಲಿಲ್ಲ. ಇನ್ನು ಈಗ ಯಾಕೆ ಟೆನ್ಶನ್ ಮಾಡುವುದು? ನಗು ಬಂದಿತ್ತು ಅಕ್ಕು ಪೂಜಾರ್ತಿಗೆ! ಈಗ ಮೂರು ಹೊತ್ತೂ ಮಾತ್ರೆ ನುಂಗುವುದು. ಮೂರು ತಿಂಗಳಿಗೊಮ್ಮೆ ಪರೀಕ್ಷೆ. ಅಕ್ಕು ಪೂಜಾರ್ತಿ ಸಣ್ಣದಾಗಿ ನರಳಿದಳು. ಮಾಲಿ ಬೆಳಗ್ಗೆ ಮಕ್ಕಳನ್ನು ಕರೆದುಕೊಂಡು ಅಪ್ಪನ ದಿನವೆಂದು ಮಿಜಾರಿಗೆ ಹೋಗಿದ್ದಳು. ಹೋಗುವ ಮೊದಲು ಮಾತ್ರೆ ತೆಗೆದಿಟ್ಟು, "ನಾವು ಬರುವ ವರೆಗೆ ಸುಮನನ್ನು ಕೂತುಕೊಳ್ಳಿಸಿ" ಅಂದದ್ದು ಅಕ್ಕು ಪೂಜಾರ್ತಿಗೆ ನೆನಪಿದ್ದರೂ ಸುಮ ಹೊರಟಾಗ ಹೇಳಿರಲಿಲ್ಲ. ಈಗ ಎದೆ ಪುನಃ ಹಿಂಡಿದಂತೆ ಆದಾಗ ಸುಮನನ್ನು ನಿಲ್ಲಿಸಬಹುದಿತ್ತು ಅನ್ನಿಸದಿರಲಿಲ್ಲ. ಯಾಕೋ ತನ್ನ ಕಾಲ ಹತ್ತಿರ ಬಂತು ಅನ್ನುವ ಅವ್ಯಕ್ತ ಚಳಕು ಎದೆಯಿಂದ ಹೊರಟು ಕಾಲ ಕಿರು ಬೆರಳಿನವರೆಗೆ ಪಸರಿಸಿದಂತಾಯಿತು. ಮನಸ್ಸಿನ ಮೂಲೆಯಲ್ಲಿ ಇದ್ದ ಅಂತಕ್ಕ ಎದ್ದು ಬಂದು ಈಸಿಚೇರಿನ ಬೆನ್ನಿಗೆ ಒರಗಿ ನಕ್ಕಳು. 'ಭಯವೇನೆ ಅಕ್ಕು. ಯಾಕೆ ಭಯ? ಮಾಡುವುದನ್ನು ಮಾಡಿ, ಆಡುವುದನ್ನು ಆಡಿ ಆಗಿದೆ ಅನ್ನಿಸಿದರೆ ತಟ್ಟಂತ ಏಳುವುದು. ಕುಂಡೆಯ ಹುಡಿ ತಟ್ಟುವುದು. ಜುಮ್ಮಂತ ಹೊರಡುವುದು ಅಷ್ಟೇ' ಮಾಡುವುದನ್ನೆಲ್ಲ ಮಾಡಿದ್ದೇನೆಯೇ? ಅಕ್ಕು ಪೂಜಾರ್ತಿ ನಿಟ್ಟುಸಿರಿಟ್ಟಳು. ಕಳೆದ ಕೆಲವು ತಿಂಗಳುಗಳಿಂದ ಮನಸ್ಸನ್ನು ಕೊರೆಯುತ್ತಿದ್ದ ಯೋಚನೆಗಳು ಒಂದರ ಹಿಂದೊಂದರಂತೆ ಹೊರ ಬರತೊಡಗಿದಾಗ ಯಾವುದೋ ಮಂಪರು ಅಮಲಿನಂತೆ ಅವಳನ್ನು ತಬ್ಬಿ ಕೊಳ್ಳುತ್ತದೆ. ಹುಟ್ಟಿದಂದಿನಿಂದ ಹಿಡಿದು ಈ ನಲ್ವತ್ತನೆಯ ವಯಸ್ಸಿನ ವರೆಗೆ ಯಾವತ್ತೂ ರಮೇಶ ತನ್ನ ತಂದೆಯ ಬಗ್ಗೆ ಕೇಳಿದ ನೆನಪಿಲ್ಲ ಅಕ್ಕು ಪೂಜಾರ್ತಿಗೆ. ಆದರೆ, ಗೋಪಾಲಣ್ಣನೊಂದಿಗೆ ಜಗಳಾಡಿದ ನಂತರ ತನ್ನ ಮುಖವನ್ನು ದೃಷ್ಟಿಸುವಾಗೆಲ್ಲಾ ಯಾವುದೋ ಅವ್ಯಕ್ತ ನೆರಳು ಅವನ ಕಣ್ಣಲ್ಲಿ ಇಣುಕುತ್ತಿದೆ ಅನ್ನುವುದು ಅವಳ ಅನುಭವಕ್ಕೆ ಬಂದಿದೆ. ತನ್ನ ಹೆಸರಿನಲ್ಲಿ ಅವನು ಲಕ್ಷಗಟ್ಟಲೆ ಖರ್ಚು ಮಾಡುವಾಗೆಲ್ಲಾ ಮಗನ ಮನಸ್ಸಿನಲ್ಲಿ ಯಾವುದೋ ನೋವಿದೆ ಅನ್ನುವ ಅವಳ ಸಂಶಯ ಬಲವಾಗುತ್ತಲೇ ಇದೆ. ಅದರೊಂದಿಗೆ ಮರೆತುಹೋಗಿದ್ದ ಬೆದ್ರದ ನೆನಪುಗಳೂ ಮತ್ತೊಮ್ಮೆ ಮರುಕಳಿಸುತ್ತವೆ. ಈ ನಲವತ್ತು ವರ್ಷಗಳಲ್ಲಿ ಬೆದ್ರ ಪ್ರಯಾಣದ ಮಟ್ಟಿಗೆ ಬಹಳಷ್ಟು ಹತ್ತಿರಾಗಿದೆ ಅನ್ನುವುದು ಅವಳಿಗೆ ತಿಳಿದಿದೆ. ಹಾಗೆ ಮೊಬೈಲ್ ಫೋನು ಅನ್ನುವುದು ಯಾವ ಮೂಲೆಯಿಂದ ಬೇಕಾದರೂ ನಿಮಿಷಗಳಲ್ಲೇ ವಿವರ ತಲುಪಿಸುತ್ತದೆ ಎನ್ನುವ ವಿಚಾರವೂ ಅವಳಿಗೆ ತಿಳಿಯದ್ದಲ್ಲ. ತನಗೆ ತಾಳಿ ಕಟ್ಟಿದ ವ್ಯಕ್ತಿ ಈಗ ಬದುಕಿದ್ದಾನೆಯೇ ಎಂದು ಖಚಿತವಿಲ್ಲದಿದ್ದರೂ ಆ ಮನೆ ಇವತ್ತೂ ಅಲ್ಲೇ ಇದ್ದೀತು. ಒಮ್ಮೆ ರಮೇಶನನ್ನು ಕರೆದುಕೊಂಡು ಪುನಃ ಆ ಮನೆಯ ಮೆಟ್ಟಲು ಹತ್ತಬೇಕು. ಅಲ್ಲಿ ದೇವರ ಮಣೆ ಎದುರು ಅಡ್ಡಬಿದ್ದು, "ಇದು ನಿನ್ನ ಅಪ್ಪನ ಮನೆ" ಅಂತ ಅವನ ಕಣ್ಣು ನೋಡಿ ಹೇಳಬೇಕು ಎಂಬ ಬಯಕೆ ಕೆಲದಿನಗಳಿಂದ ಅವಳ ಮನಸ್ಸಿನಲ್ಲಿ ಮೂಡಿದೆ.